ಒಂದು ಹಾಸ್ಪೆಲ್ ಕೊಟ್ಟಿದ್ದಾರೆ. ಆ ಪ್ರದೇಶದಲ್ಲಿ ಬಹಳ ಹಿಂದುಳಿದ ಜನ ವಾಸಿಸುತ್ತಿರುವುದರಿಂದ ಅಲ್ಲಿಗೆ ಇನ್ನೂ ಒಂದು ಹಾಸ್ಪೆಲನ್ನು ಕೊಡಬೇಕು ಎಂದು ಕೇಳುತ್ತೇನೆ.

ಅಧ್ಯಕ್ಷರು:- ಆಯಿತು, ಈ ವರ್ಷ 1997-98ನೇ ಸಾಲಿನಲ್ಲಿ ಮಾಡಿಸಿ ಕೊಡುತ್ತಾರೆ ಬಿಡಿ, ಅಂತೂ ಛಾನ್ಸ್ ಸಿಕ್ಕಿತು ಎಂದು ಒಂದು ಹಾಸ್ಪೆಲ್ ಹೊಡೆದುಕೊಂಡಿರಿ.

ಶ್ರೀ ಮಾಲೀಕಯ್ಯ ಗುತ್ತೇದಾರ್: ಇನ್ನೊಂದು ಹಾಸ್ಪೆಲ್ ಕೊಡುವುದಕ್ಕೆ ವಿಚಾರ ಮಾಡುತ್ತೇವೆ.

ಅಧ್ಯಕ್ಷರು: ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

(ಅ) ಚುಕ್ಕೆ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ:- (ಮಾನ್ಯ ಕಾನೂನು ಸಂಸದೀಯ ವ್ಯವಹಾರ ಸಚಿವರು):- ಮಾನ್ಯ ಸಭಾಧ್ಯಕ್ಷರೇ 7ನೇಯ ಪಟ್ಟಿಯಲ್ಲಿ ಇದ್ದಂತಹ 89 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳಿಗೆ ಉತ್ತರವನ್ನು ಈ ಸದನದಲ್ಲಿ ಮಂಡಿಸಿದ್ದೇವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಗಣಿಗಾರಿಕೆಯಿಂದ ಸಾಗಾಣಿಕೆ ಆಗುತ್ತಿರುವ ವಿವಿಧ ಖನಿಜಗಳು

407 (663) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗಣಿಗಾರಿಕೆಯಿಂದ ಸಾಗಾಣಿಕೆ ಆಗುವ ವಿವಿಧ ಖನಿಜಗಳ (ಕಲ್ಲು ಮತ್ತು ಮರಳು ಸೇರಿದಂತೆ) ಪರವಾನಗಿ ಮತ್ತು ಸರ್ಕಾರಕ್ಕೆ ಪಾವತಿ ಮಾಡಿದ ರಶೀದಿಗಳನ್ನು ತಪಾಸಣೆ ಮಾಡುವ ಅಧಿಕಾರ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಯಾವ ಯಾವ ಅಧಿಕಾರಿಗಳಿಗೆ ನೀಡಲಾಗಿದೆ?

ಆ) ಶಿವಮೊಗ್ಗ ಜಿಲ್ಲೆಯಲ್ಲಿ 1995-96, 1996-97ನೇ ಸಾಲಿನಲ್ಲಿ ಈ ರೀತಿ ತಪಾಸಣೆ ಮಾಡಿ ದಂಡ ವಿಧಿಸಿ ಇಲಾಖೆಗೆ ಜಮಾ ಮಾಡಿದ ಮೊತ್ತವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)?

ಶ್ರೀಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು).

ಅ) ಜಿಲ್ಲೆ ಮತ್ತು ತಾಲ್ಲೂಕು ಹಂತಗಳಲ್ಲಿ ಹಿರಿಯ ಭೂವಿಜ್ಞಾನಿಗಳು:ಭೂವಿಜ್ಞಾನಿಗಳು ಈ ಅಧಿಕಾರವನ್ನು ಹೊಂದಿರುತ್ತಾರೆ.

ಆ) ವಿವರಣೆಯನ್ನು ಅನುಬಂಧದಲ್ಲಿ ನೀಡಲಾಗಿದೆ.

ANNEXURE

STATEMENT SHOWING THE TALUKWISE PARTICULARS OF PENALTY REALISED IN SHIMOGA DISTRICT FOR THE YEARS 1995-96 & 1996-97

Sl. No.	Taluk	Penalty (Rs.) 1995-96	1996-97 (Upto Jan 1997).
1.	Thirthahalli	49,788	21,400
2.	Shimoga	286,675	26,300
3.	Honnali	4,200	2,500
4.	Sagara	12,525	6,900
5.	Hosanagar	9,330	4,938
6.	Soraba	3,900	1,000
7.	Shikaripur	1,000	1,300
8.	Chennagiri	2,900	3,775
9.	Bhadravathi	3,950	2,550
Total		1,14,268	70,663

ಶಿವಮೊಗ್ಗದ ದೇವಿ ಸಕ್ಕರೆ ಕಾರ್ಖಾನೆ ಮುಚ್ಚಿರುವುದು

410(764) ಶ್ರೀ ಆಯನೂರು ಮಂಜುನಾಥ (ಹೊಸನಗರ):– ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದ ದೇವಿ ಸಕ್ಕರೆ ಕಾರ್ಖಾನೆ ಮುಚ್ಚಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ಕಾರ್ಖಾನೆ ಕಬ್ಬು ಬೆಳೆಗಾರರಿಗೆ ಹಾಗೂ ಸಿಬ್ಬಂದಿಗೆ ನೀಡಬೇಕಾದ ಬಾಕಿ ಮೊತ್ತವೆಷ್ಟು; ಕಬ್ಬು ಬೆಳೆಗಾರರಿಗೆ ಹಾಗೂ ಈ ಕಾರ್ಖಾನೆಯ ಸಿಬ್ಬಂದಿಗೆ ನೀಡಬೇಕಾದ ಸಂಬಳ ನೀಡದೆ ಕಬ್ಬು ಬೆಳೆಗಾರರು ಹಾಗೂ ಸಿಬ್ಬಂದಿ ಸಂಕಷ್ಟಕ್ಕೀಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಈ ಕಾರ್ಖಾನೆಯನ್ನು ಸರ್ಕಾರವೇ ವಹಿಸಿಕೊಂಡು ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲವೆ?